## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ.

ಸಿ.ಸಿ. ನಂ.108/2020

CW-8/PW-5

| | | |
|---|---|---|
| ಹೆಸರು | : | ನವೀನ್.ಎಸ್. |
| ತಂದೆ ಹೆಸರು | : | ಲೇಟ್ ಶಿವಕುಮಾರಸ್ವಾಮಿ |
| ವಯಸ್ಸು | : | 47 ವರ್ಷ |
| ವೃತ್ತಿ | : | ಮುಖ್ಯ ಪೇದೆ, ಸೈಬರ್ ಕ್ರೈಂ ಪೊಲೀಸ್ ಠಾಣೆ, ರಾಮನಗರ |
| ವಾಸ ಸ್ಥಳ | : | ರಾಮನಗರ. |
| ದಿನಾಂಕ | : | 09-07-2026. |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-

ನಾನು 2016 ರಿಂದ 2021ರವರೆಗೆ ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 12.03.2020ರಂದು ಚಾಸಾ-11ರವರು ಈ ಕೇಸಿನಲ್ಲಿ ಆರೋಪಿತರ ಪತ್ತೆಗಾಗಿ ನನ್ನನ್ನು ಹಾಗೂ ಚಾಸಾ-9ರವರನ್ನು ನೇಮಿಸಿದ್ದು, ಅದರಂತೆ ನಾನು ಬಾತ್ಮೀದಾರರಿಂದ ಮಾಹಿತಿ ಪಡೆದು ಡಣಾಯಕನಪುರಕ್ಕೆ ದಿನಾಂಕ 12.03.2020ರಂದು ಬೆಳಗ್ಗೆ 9.00 ಗಂಟೆಗೆ ಕೆಂಪಾಜಮ್ಮನವರ ಮನೆಯ ಬಳಿ ಹೋದೆವು, ಅಲ್ಲಿ ಒಬ್ಬ ಆಸಾಮಿ ನಿಂತಿದ್ದನು, ಆತನನ್ನು ವಿಚಾರಿಸಲಾಗಿ ಆತನ ಹೆಸರು ರಾಮಚಂದ್ರಯ್ಯ ಬಿನ್ ವೆಂಕಟಯ್ಯ, 43 ವರ್ಷ, ಡಣಾಯಕನಪುರ ಗ್ರಾಮ ಎಂದು ತಿಳಿಸಿದರು. ಆತನನ್ನು ನಾನು ಮತ್ತು ಚಾಸಾ-9ರವರು ವಶಕ್ಕೆ ಪಡೆದು, ಠಾಣೆಗೆ ತಂದು ಬೆಳಗ್ಗೆ 10:00 ಗಂಟೆಗೆ ಚಾಸಾ-11ರವರ ಮುಂದೆ ಹಾಜರುಪಡಿಸಿರುತ್ತೇವೆ. ಆತ ನ್ಯಾಯಾಲಯದ ಮುಂದೆ ಆರೋಪಿ ಸ್ಥಾನದಲ್ಲಿ ನಿಂತಿರುತ್ತಾನೆ.

ಪಾಟೀ ಸವಾಲು ಆರೋಪಿ ಪರ ಶ್ರೀ ಜಿ.ಕೆ., ವಕೀಲರಿಂದಃ-

ಆರೋಪಿಯ ಪತ್ತೆಗಾಗಿ ಚಾಸಾ-11ರವರು ಲಿಖಿತ ರೂಪದಲ್ಲಿ ಆದೇಶ ಮಾಡಿರಲಿಲ್ಲ. ಚಾಸಾ-11ರವರು ಆರೋಪಿಯ ವಿಳಾಸವನ್ನು ಲಿಖಿತ ರೂಪದಲ್ಲಿ ನಮಗೆ ಕೊಟ್ಟಿಲ್ಲ. ಆರೋಪಿಯನ್ನು ನಾವು ವಶಕ್ಕೆ ಪಡೆದೇ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.